ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ
ನ್ಯಾಯಾಲಯ, ಚನ್ನರಾಯಪಟ್ಟಣ
ಸಿ ಸಿ ನಂ: 7/2026

ಚಾಸಾ: 1 ಪ್ರಾಸಾ:1

| | | |
|---|---|---|
| ಸಾಕ್ಷಿಯ ಹೆಸರು | : | ಸುಕನ್ಯ |
| ಗಂಡನ ಹೆಸರು | : | ಉಮೇಶ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಶ್ರವಣಬೆಳಗೊಳ |

ದಿನಾಂಕ **18.08.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:

ಮೃತ ಉಮೇಶ ನನ್ನ ಗಂಡ. ದಿ:02.11.2025 ರಂದು ಬೆಳಗ್ಗೆ 12.25ರ ಸಮಯದಲ್ಲಿ ನನಗೆ ಸರ್ಕಾರಿ ಆಸ್ಪತ್ರೆಯಿಂದ ದೂರವಾಣಿ ಕರೆ ಬಂದಿದ್ದು ನನ್ನ ಗಂಡನಿಗೆ ಅಪಘಾತವಾಗಿರುತ್ತದೆ ಎಂದು ತಿಳಿಸಿದರು. ನಂತರ ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಗಂಡ ಮೃತಪಟ್ಟಿದ್ದರು. ಅಪಘಾತ ಯಾವರೀತಿ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೊಲೀಸರಿಗೆ ಮರುಹೇಳಿಕೆ ನೀಡಿಲ್ಲ. ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಗಣಿಸಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಿದೆ)**

ಪಾಟೀಸವಾಲು: ಮಾನ್ಯ ಎ ಪಿ ಪಿ ರವರಿಂದ:

ದಿ:02.11.2025 ರಂದು ಬೆಳಗ್ಗೆ 6.00 ಗಂಟೆಗೆ ಸಮಯದಲ್ಲಿ ನನ್ನ ಗಂಡ ಉಮೇಶ್ ರವರು ಎಂದಿನಂತೆ ಹೊಟೇಲ್ ಕೆಲಸಕ್ಕೆ ಹೋಗಿರುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ಮಗಳು ಸಾಸಾಲು ಗ್ರಾಮದ ಜಾತ್ರೆಗೆ ವ್ಯಾಪಾರಕ್ಕೆ ಹೋಗಿದ್ದು ಬೆಳಗ್ಗೆ 11.30 ಕ್ಕೆ ನನ್ನ

ಗಂಡ ವ್ಯಾಪಾರದ ಬಳಿ ಬರುತ್ತೇನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಂತರ ಮದ್ಯಾಹ್ನ 12.30ರ ಸಮಯದಲ್ಲಿ ಆಸ್ಪತ್ರೆಯ ಸಿಬ್ಬಂದಿ ದೂರವಾಣಿ ಮೂಲಕ ಕರೆ ಮಾಡಿ ನನ್ನ ಗಂಡನಿಗೆ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಂತರ ಚಾಸಾ-13 ರವರಿಗೆ ನಾನು ವಿಚಾರ ತಿಳಿಸಿ ಆಸ್ಪತ್ರೆಗೆ ಬಂದಿರುತ್ತೇನೆ ಎಂದರೆ ಸರಿ. ಆಸ್ಪತ್ರೆಯಲ್ಲಿ ನನ್ನ ಗಂಡ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಾನು ಅಲ್ಲಿ ವಿಚಾರ ತಿಳಿಯಲಾಗಿ ಸಾಸಲು ಗ್ರಾಮದ ಕಡೆ ನನ್ನ ಗಂಡ ಕೆಎ -54-0971 ನಂಬರ್ ನ ಪ್ಯಾಸೆಂಜರ್ ವಾಹನದಲ್ಲಿ ಮ ದ್ಯಾಹ್ನ 12.00 ಗಂಟೆ ಸಮಯದಲ್ಲಿ ಹೊರಟು ಶ್ರವಣಬೆಳಗೊಳ ಕಿಕ್ಕೇರಿ ಮುಖ್ಯ ರಸ್ತೆಯ ಗುಡಿಗೇರ ಹಳ್ಳಿಯ ಬಳಿ 12.30 ರ ಸಮಯದಲ್ಲಿ ಆಟೋ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಆಟೋವನ್ನು ರಸ್ತೆಯ ಗುಂಡಿಗೆ ಜೋರಾಗಿ ಇಳಿಸಿದ ಎಂದರೆ ಸರಿಯಲ್ಲ. ಇದರ ಪರಿಣಾಮ ನನ್ನ ಗಂಡನಿಗೆ ತಲೆಗೆ ಪೆಟ್ಟಾಗಿರುತ್ತದೆ ಎಂದರೆಸ ರಿಯಲ್ಲ. ಸದರಿ ಅಪಘಾತಕ್ಕೆ ಆಟೋ ಚಾಲಕ ರವಿ ಅವರೇ ಕಾರಣ ಎಂದು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ20.11.2025 ರಂದು ಪೊಲೀಸ್ ಠಾಣೆಯಲ್ಲಿ ನೋಡಿ ಗುರುತಿಸಿದ್ದು ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆನೀಡಿರುತ್ತೇನೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ಸಾಕ್ಷಿ ನಿರಾಕರಿಸಿದ್ದು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಂತೆ ದೂರು ಮತ್ತು ಹೇಳಿಕೆ ನೀಡಿದ್ದಾರ ಆರೋಪಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

sd/-

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.